ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in
Phone - 080 26980100
Fax - 080 26422377
ಡಿಎಸ್ಇಆರ್‌ಟಿ
DSERT

ಸಂಖ್ಯೆ :OB-10/ಲಿಫ್ಟ್ ನಿರ್ವಹಣೆ/04/2021-22 ದಿನಾಂಕ: 08/02/2022

**ದರಪಟ್ಟಿ ಆಹ್ವಾನಿಸಿ ಪ್ರಕಟಣೆ**

ವಿಷಯ : ಈ ಕಛೇರಿಯಲ್ಲಿರುವ 02 ಲಿಫ್ಟ್‌ಗಳ ವಾರ್ಷಿಕ ನಿರ್ವಹಣೆ ಕುರಿತು ದರಪಟ್ಟಿ ಕರೆಯುವ ಬಗ್ಗೆ.

=***=

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಡಿ.ಎಸ್.ಇ.ಆರ್.ಟಿ ಕಛೇರಿಯಲ್ಲಿರುವ 02 ಲಿಫ್ಟ್‌ಗಳ ವಾರ್ಷಿಕ ನಿರ್ವಹಣೆ (AMC) ಮುಕ್ತಾಯಗೊಂಡಿದ್ದು, ಸದರಿ 02 ಲಿಫ್ಟ್‌ಗಳ ವಾರ್ಷಿಕ ನಿರ್ವಹಣೆ ಕುರಿತು (ಕೊಟೇಶನ್) ದರ-ಪಟ್ಟಿಯನ್ನು ಕರೆಯಲಾಗಿದೆ.

ಆಸಕ್ತಿವುಳ್ಳ ಸಂಸ್ಥೆಯವರು ಈ ಕಛೇರಿಯ ಸೂಚನಾ ಫಲಕದಲ್ಲಿ ಹಾಗೂ ಕಛೇರಿಯ Website ನಲ್ಲಿ ಪ್ರಕಟಿಸಲಾದ ಪ್ರಕಟಣೆಯನ್ನು ಪರಿಶೀಲಿಸಿ, ದಿನಾಂಕ: 16/02/2022 ರೊಳಗಾಗಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಕಛೇರಿ, #4. 100ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು-560085 ಇಲ್ಲಿಗೆ ಮುಚ್ಚಿದ ಲಕೋಟೆಯೊಂದಿಗೆ ದರಪಟ್ಟಿಯನ್ನು ನಿಗದಿತ ಅವಧಿಯೊಳಗೆ ಸಲ್ಲಿಸತಕ್ಕದ್ದು. ವಿಳಂಬವಾದ ದರಪಟ್ಟಿ ಸ್ವೀಕೃತಿಗೆ ಈ ಕಛೇರಿ ಜವಾಬ್ದಾರಿಯಾಗಿರುವುದಿಲ್ಲ.

ಲಕೋಟೆಯ ಮೇಲೆ ಕಡ್ಡಾಯವಾಗಿ "LIFT AMC" ಎಂಬುದಾಗಿ ನಮೂದಿಸಿರತಕ್ಕದ್ದು.

**ನಿಬಂಧನೆಗಳು:**

- ಕೋಟೇಶನ್ ಗಳು ಕೆಟಿಪಿಪಿ ನಿಯಮಗಳಿಗೆ ಒಳಪಟ್ಟಂತೆ ಇರತಕ್ಕದ್ದು. ನಿರ್ವಹಣೆಗೆ ಯಾವುದೇ ಮುಂಗಡ ನೀಡಲಾಗುವುದಿಲ್ಲ.
- ಸರಬರಾಜುದಾರ ಸಂಸ್ಥೆಯು ಎಲ್ಲಾ ಶಾಸನಬದ್ಧ ನೋಂದಣಿಗಳನ್ನು ಹೊಂದಿರತಕ್ಕದ್ದು.
- ದರಪಟ್ಟಿಯನ್ನು ಸಲ್ಲಿಸುವ ಸಂಸ್ಥೆಯವರು ಮಾಸಿಕವಾಗಿ ಕಛೇರಿಗೆ ಬೇಟಿ ನೀಡಿ ಪರಿಶೀಲಿಸಿ ವರದಿ ನೀಡತಕ್ಕದ್ದು ಹಾಗೂ ಲಿಫ್ಟ್‌ಗಳಿಗೆ ಸಂಬಂಧಿಸಿದಂತೆ ತೊಂದರೆ ಇದೆ ಎಂದು ಕಛೇರಿಯಿಂದ ದೂರವಾಣಿಯಲ್ಲಿ ತಿಳಿಸಿದ ಕೂಡಲೇ ಬಂದು ಪರಿಶೀಲಿಸಿ ದುರಸ್ಥಿ ಪಡಿಸಬೇಕು.
- ಲಿಫ್ಟ್‌ಗಳ ವಾರ್ಷಿಕ ನಿರ್ವಹಣೆಗೆ ಸಂಬಂಧಿಸಿದ ಮೊತ್ತವನ್ನು ವಾರ್ಷಿಕವಾಗಿ ಎರಡು ಕಂತುವಿನಲ್ಲಿ ಪಾವತಿಸಲಾಗುವುದು.
- ದರಪಟ್ಟಿಯು ಎಲ್ಲಾ ರೀತಿಯ ತೆರಿಗೆಗಳನ್ನೊಳಗೊಂಡಂತೆ ಇರತಕ್ಕದ್ದು.
- ನಿರ್ವಹಣೆಗೆ ಸಂಬಂಧಿಸಿದ ಬಿಲ್ಲು ಸ್ವೀಕೃತವಾದ ದಿನಾಂಕದಿಂದ ಕನಿಷ್ಟ 20 ರಿಂದ 30 ದಿನಗಳ ಒಳಗಾಗಿ ಕೆ-2, ಇ-ಪಾವತಿ ಮುಖಾಂತರದಲ್ಲಿ ಪರಿಶೀಲಿಸಿ ನಿಯಮಾನುಸಾರ ಪಾವತಿ ಕ್ರಮಗಳನ್ನು ಕೈಗೊಳ್ಳಲಾಗುವುದು.
- ಕೊಟೇಶನ್ ಪರಿಶೀಲಿಸಿದ ನಂತರದಲ್ಲಿ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ನಿರ್ದೇಶಕರದ್ದಾಗಿರುತ್ತದೆ.

ನಿರ್ದೇಶಕರು,
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು
ತರಬೇತಿ ಇಲಾಖೆ,